## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಸ.ಅ.(ಶಾನ)/ವಾ-116/ಪಿಆರ್/ /2020-21.

ಸಹಾಯಕ ಅಭಿಯಂತರರ ಕಛೇರಿ
1 ನೇ ಮುಖ್ಯರಸ್ತೆ, ಎಲ್.ಆರ್ ನಗರ
ನೀಲಸಂದ್ರ ವಾರ್ಡ್ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
ಬೆಂಗಳೂರು. ದಿನಾಂಕ : 07-11-2020

*ದಿನಾಂಕ: 07/11/2020 ರಂದು ವಾರ್ಡ್ 116 ಕಛೇರಿಯಲ್ಲಿ ಶ್ರೀಮತಿ ಡಾ||ಸಂಗಮಿತ್ರ, ವಾರ್ಡ್ 116ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಹಂತದ ಸಮಿತಿ ಸಭೆಯ ನಡವಳಿಗಳು:-*

ಹಾಜರಿದ್ದವರು :

1. ಶ್ರೀ. ಗುರುಮುರ್ತಿ, ಕಂದಾಯ ಅಧಿಕಾರಿಗಳು.
2. ಶ್ರೀ.ನೀಲಾಂಜನಪ್ಪ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ 116 ನೀಲಸಂದ್ರ.
3. ಶ್ರೀ. ಮಂಜುನಾಥ್, ಕಂದಾಯ ಪರೀವೀಕ್ಷಕರು ವಾರ್ಡ್ 116 ನೀಲಸಂದ್ರ
4. ಶ್ರೀ ನವೀನ್ ಕುಮಾರ ಎಸ್.ಎನ್ ವಾರ್ಡ್ -116 ನೀಲಸಂದ್ರ ಮಾರ್ಷಲ್.
5. ಶ್ರೀಮತಿ ಜೆ. ಸುಮತಿ. ವಾರ್ಡ್ ಕಮಿಟಿ ಸದ್ಯಸರು.
6. ಶ್ರೀ ಜಕ್ಕಾಉಲ್ಲಾ ಷರೀಫ್. ವಾರ್ಡ್ ಕಮಿಟಿ ಸದ್ಯಸರು.
7. ಶ್ರೀ ಸಂಪಗಿ, ಆರೋಗ್ಯ ಇಲಾಖೆ.
8. ಶ್ರೀ ನರಸಿಂಹ, ಆರೋಗ್ಯ ಇಲಾಖೆ.
9. ಶ್ರೀ ತುಳಸಿರಾಮ್ (ದಿ.ದ. ಸಹಾಯಕರು)
10. ಶ್ರೀ. ಹರ್ಷ.ಎಸ್ ವಾರ್ಡ್ 116 ನೀಲಸಂದ್ರ, ವಾರ್ಡ್ ಕಮಿಟಿ ಕಾರ್ಯದರ್ಶಿ ಮತ್ತು ಕಿರಿಯ ಅಭಿಯಂತರರು.

ಸಮಿತಿಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು ಹಾಗೂ ಅಧಿಕಾರಿಗಳನ್ನು ಸ್ವಾಗತಿಸುತ್ತಾ ಪರಸ್ಪರ ಪರಿಚಯದೊಂದಿಗೆ ಸಭೆಯನ್ನು ಪ್ರಾರಂಭಿಸುತ್ತಾ ಮುಖ್ಯ ವಿಷಯದ ಬಗ್ಗೆ ಚರ್ಚಿಸಲು ತಿಳಿಸಿದರು.

ಕಾರ್ಯದರ್ಶಿಗಳು ಮಾತನಾಡುತ್ತಾ ದಿನಾಂಕ: 17-10-2020 ರಂದು ನಡೆದ ಸಭೆಯಲ್ಲಿ ಚರ್ಚಿಸಿರುವ ವಿಷಯಗಳ ಕುರಿತು ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತಾ, ಶ್ರೀಮತಿ ಡಾ॥ ಸಂಗಮಿತ್ರ ವಾರ್ಡಿನ ನೋಡಲ್ ಅಧಿಕಾರಿಯವರು ಸಭೆಯನ್ನು ಮುಂದುವರೆಸುತ್ತಾ, ಹಿಂದಿನ ಸಭೇಯ ನಡುವಳಿಗಳನ್ನು ಓದಿ ದಾಖಲಿಸಲಾಯಿತು.

- ವಾರ್ಡ್ ಹಂತದ ಸಮಿತಿ ಸಭೆಯಲ್ಲಿ, ವಾರ್ಡ್ ವ್ಯಾಪ್ತಿಗೆ ಸೇರಪಡುವ ಎಲ್ಲಾ ಇಲಾಖೆಯಿಂದ ಸಂಬಂಧಿಸಿದ ಅಧಿಕಾರಿಗಳ ಹಾಜರಿ ಕಡ್ಡಾಯವಾಗಿದ್ದು ಗೈರುಹಾಜರಾದಲ್ಲಿ ಸೂಕ್ತ ಕ್ರಮ ಕೈಗೊಂಡು ನೋಟೀಸ್‌ನ್ನು ಜಾರಿಗೊಳಿಸಲಾವುದು ಎಂದು ಸೂಚಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳು ಹಾಗೂ ಸರಿಯಾದ ಸಂಬಳವಿಲ್ಲದ ಕಾರಣ, ಸದರಿ ರವರಿಗೆ ಮೂಲಭೂತ ಸೌಕರ್ಯಗಳನ್ನು ಹಾಗೂ ಸಂಬಳವನ್ನು ಕಲ್ಪಿಸಲು ಸೂಚಿಸಿರುತ್ತಾರೆ.

- ವಾರ್ಡ್ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ರಸ್ತೆಗಳಗೂ ಕಸದ ವಾಹನಗಳನ್ನು ಕಳುಹಿಸಿ ಹಸಿತ್ಯಾಜ್ಯ ಮತ್ತು ಒಣತ್ಯಾಜ್ಯವನ್ನು ವಿಂಗಡಿಸಿ ಸರ್ಮಪಕವಾಗಿ ಕಾರ್ಯನಿರ್ವಹಿಸಲು ಹಾಗೂ ಸ್ವಚ್ಛತೆ ಕಾಪಾಡಲು ಹಿರಿಯ ಆರೋಗ್ಯಧಿಕಾರಿಗಳು ಘನತ್ಯಜ್ಯ ರವರಿಗೆ ಸೂಚಿಸಿದರು ಇದನ್ನು ಸದರಿ ಅಧಿಕಾರಿಗಳು ಸರಿಯಾಗಿ ನಿರ್ವಹಿಸಲು ಒಪ್ಪಿದರು.
- ಹಸಿತ್ಯಾಜ್ಯ ಹಾಗೂ ಒಣತ್ಯಾಜ್ಯವನ್ನು ನಿವಾಸಿಗಳು ವಿಂಗಡಿಸದಿದ್ದಲ್ಲಿ ಸದರಿ ರವರಿಗೆ ಅಧಿಕಾರಿಗಳು ಮಾರ್ಷ್‌ಲ್‌ಗಳ ಸಹಾಯದೊಂದಿಗೆ ದಂಡ ವಿಧಿಸಲು ಸೂಚಿಸಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ರಸ್ತೆಗೆ ಸೋಂಕು ನಿವಾರಕ ಔಷಧಿಗಳ ಸಿಂಪಡಣೆಯನ್ನು ಪ್ರತಿ ವಾರದ ಸೋಮವಾರ, ಬುಧವಾರ ಮತ್ತು ಶನಿವಾರ ಸಿಂಪಡಿಸುವುದು. ಸರ್ಕಾರ ಹಾಗೂ ಬಿಬಿಎಂಪಿ ವತಿಯಿಂದ ಕರೋನಾ ವೈರಸ್ (ಕೋವಿಡ್-19) ಸಂಬಂಧ ಜಾರಿಯಲ್ಲಿರುವ ಹಾಗೂ ಮುಂದೆ ನೀಡಬಹುದಾದ ಎಲ್ಲಾ ನಿಯಮಗಳನ್ನು ತಪ್ಪದೇ ಪಾಲಿಸಲು ಹಾಗೂ ಎಲ್ಲಾ ಸೂಚನೆ ಮತ್ತು ಆದೇಶಗಳನ್ನು ಮೀರದಂತೆ ಜಾಗರೂಕತೆಯಿಂದ ಪಾಲಿಸತಕ್ಕದ್ದು.
- ವಾರ್ಡ್ ವ್ಯಾಪ್ತಿಯಲ್ಲಿನ ಎಲ್. ಆರ್. ನಗರ ಮುಖ್ಯ ರಸ್ತೆಯಲ್ಲಿ ಅನಧಿಕೃತವಾಗಿ ವಾಹನಗಳನ್ನು ನಿಲ್ದಾಣವನ್ನು ಮಾಡಿದ್ದು ತೆರವುಗೊಳಸುವ ಸಂಬಂಧ ಟ್ರಾಫೀಕ್ ಆರಕ್ಷಕ ರವರಿಗೆ ಪತ್ರವನ್ನು ಬರೆಯಲು ಕಿರಿಯ ಅಭಿಯಂತರರವರಿಗೆ ಸೂಚಿಸಿದೆ.
- ವಾರ್ಡ್ ವ್ಯಾಪ್ತಿಯಲ್ಲಿನ ಎಲ್. ಆರ್. ನಗರ, ಮುನೆಗೌಡ ಗಾರ್ಡ್‌ನ್, ರೋಸ್ ಗಾರ್ಡ್‌ನ್ ಅನೇಕ ಪ್ರದೇಶಗಳ ಮನೆಗಳಗೆ ಸರಬರಾಜು ಆಗುವ ಕುಡಿಯುವ ನೀರು ಕಲ್ಮಶವಾಗಿದ್ದು ಅದನ್ನು ಸರಿಪಡಿಸಲು BWSSB ಇಲಾಖೆಯವರಿಗೆ ಸೂಚಿಸಿದೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಾರ್ವಜನಿಕರ ಕುಂದು ಕೊರತೆಗಳಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂದು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ.

ನಂತರ ಕಾರ್ಯದರ್ಶಿಗಳು ಮಾತನಾಡುತ್ತಾ, ಮುಂದಿನ ಸಭೆಯಲ್ಲಿ ಇನ್ನಿತರೆ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಮಿತಿಯ ಸದಸ್ಯರುಗಳಗೆ ತಿಳಸುತ್ತಾ, ಸಭೆಯಲ್ಲಿ ಹಾಜರಿದ್ದ, ಎಲ್ಲಾ ಅಧಿಕಾರಿಗಳು ಹಾಗೂ ಸದಸ್ಯರುಗಳಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಸಲಾಯಿತು.

(Signature)
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ಹಾಗೂ ಕಿರಿಯ ಅಭಿಯಂತರರು
ವಾರ್ಡ್ ಸಂಖ್ಯೆ:116 ನೀಲಸಂದ್ರ

Sangamithra 9.11.2020.
ಅಧ್ಯಕ್ಷರು
ವಾರ್ಡ್ ಕಮಿಟಿ
ವಾರ್ಡ್ ಸಂಖ್ಯೆ:116 ನೀಲಸಂದ್ರ